## ನಕ್ಷತ್ರ ಪಟ



**ರಮೇಶ ಅರೋಲಿ**

ಕಲೆ: ಸಂತೋಷ್ ಸಸಿಹಿತ್ಲು

# ಮಳೆರಾಯ ಮಾಡಯ್ಯ ತುಸು ನೀ ಆರಾಮ

ಹೂವೆಲ್ಲ ಬೀಜದಿ ಒದಗ್ಯಾವ ಯಾಕೊ
ಹೂ ರಂಗು ಮಣ್ಣಾಗ ಹುದುಗ್ಯಾವ ಯಾಕೊ

ಮುತ್ತೆಲ್ಲ ಆಳದಿ ಮುದುಡ್ಯಾವ ಯಾಕೊ
ಗೊತ್ತಿಲ್ಲದಾಳವ ಕದುಡ್ಯಾವ ಯಾಕೊ

ನಿಟ್ಟುಸಿರು ಕಣ್ಣಾಗ ನೀರಾದವ್ಯಾಕೊ
ದಿಟ್ಟಿಸಿ ನೋಡಲು ಮರುಗ್ಯಾವ ಯಾಕೊ

ಬಣ್ಣೆಲ್ಲ ಬಾನಾಗ ಚದುರ್ಯಾವ ಯಾಕೊ
ನೆಲದಾಗ ರಂಗೋಲಿ ಉದುರ್ಯಾವ ಯಾಕೊ

ಹಕ್ಕಿಯ ಕೊರಳೆಲ್ಲ ಬಿಕ್ಯಾವ ಯಾಕೊ
ಮರಿಹಕ್ಕಿ ಬೆರಳಾಗಿ ನೆಕ್ಯಾವ ಯಾಕೊ



ನೆತ್ತಿಯ ನೆರಳೆಲ್ಲ ಸುತಾವ ಯಾಕೊ
ಹೊತ್ತಲ್ಲದ ಹೊತ್ತಲ್ಲಿ ಮಿಡಿತಾವ ಯಾಕೊ

ನೆರೆಬಂದು ನಗರವು ಮುಳುಗ್ಯಾವ ಯಾಕೊ
ಗಡುಸಾದ ಗುಡ್ಡವು ನಲುಗ್ಯಾವ ಯಾಕೊ

ಆನೆ ಆಡಿನ ಗೂಡು ಕಾಣಲಾರವು ಯಾಕೊ
ಮೊಲ ಜಿಂಕೆ ಮೈನಾದ ಖೂನಿಲ್ಲ ಯಾಕೊ

ಮಳೆಹುಳ ಚಿಟ್ಟೆಯು ಗುಳೆ ಹೋದವ್ಯಾಕೊ
ಕೊಕ್ಕರೆ ಬಾಯೆಲ್ಲ ಮುಕ್ಕಾದವ್ಯಾಕೊ

ಸುಡುನೆತ್ತಿ ಸೂರ್ಯನೆ ತಂಪಾಗು ನೀನು
ಚಂದಮಾಮನ ಕತೆಯ ಹೇಳುವೆ ನಾನು

ಭುವಿಯೊಂದೆ ನಮಗೆಲ್ಲ ಇನ್ನಿಲ್ಲ ಗತಿಯು
ಕಟ್ಟುವ ಹೆಸರಲ್ಲಿ ಕೆಡತಿರೆ ಸ್ಥಿತಿಯು

ಮಳೆರಾಯ ಮಾಡಯ್ಯ ತುಸು ನೀ ಆರಾಮ
ಹೆಸರಿಡಿದ ಕೂಸೆಲ್ಲ ನೆನಿತಾವ ನಿನ ನಾಮ